**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ನ್ಯಾಯಾಲಯ,ಹೊಸಕೋಟೆ**

**ಸಿಸಿ.ನಂ.1037-2020**

**ದಿನಾಂಕ 9ನೇ ಮೇ, 2025**

ರಾಜ್ಯ ಸರ್ಕಾರದ ಪರವಾಗಿ:
ವೃತ್ತ ನಿರೀಕ್ಷಕರು,
ಹೊಸಕೋಟೆ ವೃತ್ತ, ಹೊಸಕೋಟೆ .. ಪಿರ್ಯಾದುದಾರರು

ವಿರುದ್ಧ

ಕಿರಣ್ ನಿಂರ್ಬಗಿ
ಬಿನ್. ಗಂಗಾಧರಪ್ಪ,
ವಯಸ್ಸು 28 ವರ್ಷ,
ವಾಸ: ನಂ.66,2ನೇ ಮಹಡಿ,
1ನೇ ಕ್ರಾಸ್,2ನೇ ಸೆಕ್ಟರ್,
ಹೆಚ್.ಎಸ್.ಆರ್.ಲೇಔಟ್,
ಬೆಂಗಳೂರು. .. ಆರೋಪಿ

***

**ಅಪಾದನೆಯ ಸಾರಾಂಶ**

ದಿನಾಂಕ 14.12.2019 ರಂದು ರಾತ್ರಿ ಸುಮಾರು 7-50ಗಂಟೆ ಸಮಯದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಬಜಾಜ್ ಆವೇಂಜರ್–180 ಮೋಟರ್ ಸೈಕಲ್ ನೊಂದಣಿ ಸಂಖ್ಯೆ ಕೆಎ–51–ಹೆಚ್.ಡಿ.–0183 ನ್ನು ಕೋಲಾರ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಕೋಲಾರ ಕಡೆಯಿಂದ ಬೆಂಗಳೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಕೊಂಡು ಬಂದು ಹೊಸಕೋಟೆ ಪಟ್ಟಣದ, ಗೌತಮ್ ಕಾಲೋನಿಯ ಸರ್ಕಲ್ ಸಮೀಪ ರಸ್ತೆ ದಾಟುತ್ತಿದ್ದ ಬಸಂತ್ ಲಾಲ್ ರವರಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ್ದು, ಆ ಮೂಲಕ ನೀವು ಭಾ.ದಂ.ಸಂ ಕಲಂ. 279 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಅಪಾದನೆ ಇದೆ.

ಎರಡನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಬಸಂತ್ ಲಾಲ್ ರವರ ತಲೆಗೆ ಮತ್ತು ಎಡಕಾಲಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಮತ್ತು ದಿ: 07/01/2020 ರಂದು ರಾತ್ರಿ ಸುಮಾರು 8-20 ಗಂಟೆಗೆ ನ್ಯೂ ಆರ್ಕ್ ಮಿಷನ್ ಇಂಡಿಯಾ, ಹೋಂ ಅಪ್ ಹೋಂ ಅನಾಥಶ್ರಮದಲ್ಲಿ ಮೃತಪಟ್ಟಿದ್ದು. ಆ ಮೂಲಕ ನೀವು ಭಾ.ದಂ.ಸಂ ಕಲಂ. 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ನಿಮ್ಮ ಮೇಲೆ ಅಪಾದನೆ ಇದೆ.

ಪ್ರಶ್ನೆ:೧ : ನಿಮಗೆ ಓದಿ ಹೇಳಿದ ಅಪಾದನೆ ಅರ್ಥವಾಯಿತೆ?
ಉತ್ತರ:

ಪ್ರಶ್ನೆ:೨ : ನೀವು ಮೇಲಿನ ಅಪಾದನೆಯನ್ನು ಒಪ್ಪಿಕೊಳ್ಳುತ್ತೀರಾ
ಅಥವಾ ಪ್ರತಿರಕ್ಷೆ ಮಾಡಿಕೊಳ್ಳಲು ಬಯಸುತ್ತೀರಾ?
ಉತ್ತರ:

ಈ ಮೇಲಿನ ಅಪಾದನೆಯನ್ನು ಆರೋಪಿಗಳಿಗೆ ತಿಳಿಯುವ ಬಾಷೆಯಲ್ಲಿ ಓದಿ ತಿಳಿಸಿ, ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಳ್ಳಲಾಗಿದೆ ಎಂದು ಧೃಢೀಕರಿಸುತ್ತೇನೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸಕೋಟೆ.